OS 85/2021

PW-2

ದಿನಾಂಕಃ **08.08.2022** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಪಿ.ವಿ.ವೈ ವಕೀಲರಿಂದಃ**

ನಾನು ಡಿಶ್ ಕೇಬಲ್ ವ್ಯವಹಾರ ಮಾಡುತ್ತೇನೆ. ಸದರಿ ವ್ಯವಹಾರ ನಡೆಸಲು ಲೈಸೆನ್ಸ ತೆಗೆದುಕೊಂಡಿರುತ್ತೇನೆ. ನಮ್ಮ ಡಿಶ್ ಕೇಬಲ್‌ಗೆ ಸುಮಾರು 250 ಜನ ಚಂದಾದರರು ಇರುತ್ತಾರೆ. ಆ ಚಂದಾದಾರರಲ್ಲಿ ಸೋಮನಾಥ ಮತ್ತು ನಾಗರಾಜ ಸಹ ಇದ್ದಾರೆ ಎಂದರೆ ಸರಿ. ಸೋಮನಾಥ ಮತ್ತು ನಾಗರಾಜ ನನಗೆ ಸುಮಾರು 15 ವರ್ಷಗಳಿಂದ ಪರಿಚಯವಿರುತ್ತದೆ. ಪ್ರತಿವಾದಿ ಲಕ್ಷ್ಮೀದೇವಮ್ಮನವರ ಪರಿಚಯವು ನನಗೆ ಇರುತ್ತದೆ. ನಾನು ಅವರ ಮನೆಗೂ ಡಿಶ್ ಕೇಬಲ್ ಹಾಕಿದ್ದೇನೆ. ಲಕ್ಷ್ಮೀದೇವಮ್ಮನವರ ಗಂಡನ ಹೆಸರು ನನಗೆ ಗೊತ್ತು. ಅವರ ಹೆಸರು ರಾಮಪ್ಪ. ಅವರ ಇನ್ನೊಂದುಹೆಸರು ನನಗೆ ಗೊತ್ತಿಲ್ಲ. ಡಿಶ್ ಕೇಬಲ್ ಹಾಕಿಸಿರುವ ಕಾರಣ ನನಗೆ ಮತ್ತು ಲಕ್ಷ್ಮೀದೇವಮ್ಮನವರಿಗೆ ಪರಿಚಯ ಬಿಟ್ಟರೇ ಬೇರೆ ಯಾವುದೇ ವ್ಯವಹಾರ ನಮ್ಮ ನಡುವೆ ಇಲ್ಲ. ಈಗಲೂ ಲಕ್ಷ್ಮೀದೇವಮ್ಮನವರ ಮನೆಗೆ ಡಿಶ್ ಕೇಬಲ್ ಇದೆಯಾ ಎಂದರೆ ಸಾಕ್ಷಿ 1 ವರ್ಷದಿಂದ ಇಲ್ಲ ಮನೆ ಖಾಲಿ ಇದೆ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮನವರ ಮನೆಯಲ್ಲಿ ಒಬ್ಬರೇ ಇದ್ದರು ಬೇರೆ ಯಾರು ಇರಲಿಲ್ಲ. ಅವರಿಗೆ ಎಷ್ಟು ಜನ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಎಂಬುದು ನನಗೆ ಗೊತ್ತಿಲ್ಲ. ಲಕ್ಷ್ಮೀದೇವಮ್ಮನವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮೀದೇವಮ್ಮನವರು ನನಗೆ ಹಣದ ಅವಶ್ಯಕತೆ ಇದೆ ಎಂದು ನಿಮ್ಮನ್ನೇನಾದರೂ ವಿಚಾರ ಮಾಡಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮನವರನ್ನು ನೀವು ಕೊನೆಯ ಬಾರಿ ಯಾವಾಗ ನೋಡಿದ್ದೀರಿ ಎಂದರೆ ಸಾಕ್ಷಿ ಅಗ್ರಿಮೆಂಟ್ ಮಾಡಿಕೊಡಲು ಬಂದಾಗ ನೋಡಿ ಆ ನಂತರ ಅವರಿಗೆ ಆರೋಗ್ಯ ಚೆನ್ನಾಗಿ ಇಲ್ಲ ಎಂದು ಯಾರೋ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಉತ್ತರಿಸುತ್ತಾರೆ. ಯಾರು ಕರೆದುಕೊಂಡು ಹೋದರು ಎಂದರೆ ಸಾಕ್ಷಿ ಯಾರೆಂದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ಲಕ್ಷ್ಮೀದೇವಮ್ಮನವರನ್ನು ನೀವು ಕೊನೆಯದಾಗಿ ಯಾವಾಗ ನೋಡಿದ್ದೀರಿ ಎಂದರೆ ಸಾಕ್ಷಿ ವೈ.ಎನ್ ಹೊಸಕೋಟೆಯಲ್ಲಿ ಇದ್ದಾಗ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಸ್ಟಾಂಪ್ ಪೇಪರನ್ನು ದಿಃ 27.08.2020 ರಲ್ಲಿ ಖರೀದಿ ಮಾಡಲಾಗಿರುತ್ತದೆ. ದಿಃ 09.09.2020 ರಲ್ಲಿ ಅಗ್ರಿಮೆಂಟನ್ನು ಬರೆಯಲಾಗಿರುತ್ತದೆ. ಲಕ್ಷ್ಮೀದೇವಮ್ಮನವರನ್ನು ನಾನು ದಿಃ 09.09.2020 ರಲ್ಲಿ ನೋಡಿರುತ್ತೇನೆ. ದಿಃ 27.08.2020 ರಂದು ಸ್ಟಾಂಪ್ ಪೇಪರ್ ತೆಗೆದುಕೊಂಡಿರುವ ವಿಚಾರವನ್ನು ಸೋಮನಾಥ ಮತ್ತು ನಾಗರಾಜ ಇಬ್ಬರು ಹೇಳಿದರು. ಈ ವಿಚಾರವನ್ನು ಅವರಿಬ್ಬರೂ ಈ ಪ್ರಮಾಣ ಪತ್ರ ಸಲ್ಲಿಸುವ ಸಮಯದಲ್ಲಿ ನಿಮಗೆ ಮನವರಿಕೆಯಾಗುವಂತೆ ಹೇಳಿದರು ಎಂದರೆ ಸಾಕ್ಷಿ ಇಲ್ಲ ಅಗ್ರಿಮೆಂಟ ದಿನವೇ ಹೇಳಿದರು ಎಂದು ಉತ್ತರಿಸುತ್ತಾರೆ. ದಿಃ 09.09.2020 ರಂದು ಲಕ್ಷ್ಮೀದೇವಮ್ಮನವರು ವೈ.ಎನ್ ಹೊಸಕೋಟೆಯಲ್ಲಿ ಇರಲೇ ಇಲ್ಲ ಎಂದರೆ ಸಾಕ್ಷಿ ಇದ್ದರು ಎಂದು ಉತ್ತರಿಸುತ್ತಾರೆ. 2014 ರಲ್ಲಿ ಲಕ್ಷ್ಮೀದೇವಮ್ಮನವರ ಗಂಡ ರಾಮಪ್ಪನವರು ತೀರಿಕೊಂಡ ನಂತರ 2014 ರಲ್ಲಿಯೇ ತನ್ನ ಮಗ ಜಯಕೀರ್ತಿಯವರ ಜೊತೆ ವಾಸ ಇದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

ದಿಃ 24.07.2020 ರಂದು ಲಕ್ಷ್ಮೀದೇವಮ್ಮನವರನ್ನು ತುಮಕೂರಿನ ಶ್ರೀ ಶಾರದಾಂಬಾ ಟ್ರಸ್ಟ ವೃದ್ಧಾಶ್ರಮದಲ್ಲಿ ಇದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಿಃ 09.09.2020 ರಂದು ಸದರಿ ವೃದ್ಧಾಶ್ರಮಕ್ಕೆ ಲಕ್ಷ್ಮೀದೇವಮ್ಮನವರನ್ನು ನೋಡಲು ಅಥವಾ ಕರೆದುಕೊಂಡು ಹೋಗಲು ಯಾರು ಬಂದಿಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ಗೊತ್ತಿಲ್ಲ, ಆ ದಿನಾಂಕದಂದು ಲಕ್ಷ್ಮೀದೇವಮ್ಮನವರು ಬಂದಿದ್ದನ್ನು ನಾನು ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. 2014 ರಿಂದ ಲಕ್ಷ್ಮೀದೇವಮ್ಮನವರು ಈವರಗೂ ವೈ.ಎನ್ ಹೊಸಕೋಟೆಗೆ ಬಂದೇ ಇಲ್ಲ ಎಂದರೆ ಸಾಕ್ಷಿ ಅವರು ಮನೆಯಲ್ಲಿಯೇ ಇದ್ದರು ಅಗ್ರಿಮೆಂಟ ಆದ ಒಂದೆರಡು ದಿನದ ನಂತರ ಹುಷಾರಿಲ್ಲ ಎಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಅಲ್ಲಿಯವರೆಗೂ ಇದ್ದರು ಎಂದು ಉತ್ತರಿಸುತ್ತಾರೆ.

ಲಕ್ಷ್ಮೀದೇವಮ್ಮನವರು ವಯಸ್ಸಾದವರಾಗಿದ್ದು, ಅವರ ಬಳಿ ಯಾವುದೇ ಟಿ ವಿ ಇರಲಿಲ್ಲ, ಯಾವುದೇ ಡಿಶ್ ಕೇಬಲ್ ಕನೆಕ್ಷನ್ ತೆಗೆದುಕೊಂಡಿರಲಿಲ್ಲ, ನೀವು ವಾದಿಯರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಲಕ್ಷ್ಮೀದೇವಮ್ಮನವರು 2014 ರಿಂದ ತಮ್ಮ ಮಗನ ಮನೆಯಲ್ಲಿ ಇದ್ದುದರಿಂದ ಅವರು ಯಾವುದೇ ಅಗ್ರಿಮೆಂಟ ಮಾಡಿಕೊಟ್ಟಿಲ್ಲ ಮತ್ತು ಮುಂಗಡ ಹಣವನ್ನು ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ಅಗ್ರಿಮೆಂಟ ಬರೆದುಕೊಟ್ಟಿದ್ದಾರೆ ಮತ್ತು ಹಣವನ್ನು ತೆಗೆದುಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ.

ಲಕ್ಷ್ಮೀದೇವಮ್ಮನವರಿಗೆ ಡಿಶ್ ಟಿ ವಿ ಕನೆಕ್ಷನ್ ಕೊಟ್ಟಿದ್ದ ಬಾಬ್ತು ತಿಂಗಳ ಹಣ ಸ್ವೀಕರಿಸಿದ ಬಗ್ಗೆ ರಶೀದಿ ಕೊಟ್ಟ ಬಾಬ್ತು ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಹಣ ಸ್ವೀಕರಿಸುತ್ತಿದ್ದೆವು ರಶೀದಿ ಏನು ಕೊಡುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.